**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು, ವಿಜಯಪೂರ ಇವರ ನ್ಯಾಯಾಲಯ**

ಸ್ಪೇಷಲ್ ಕೇಸ್ ಎಸ್.ಸಿ./ಎಸ್.ಟಿ.ನಂ.29/2017
ಪಿ.ಡಬ್ಲ್ಯೂ.03
ಸಿ.ಡಬ್ಲ್ಯೂ.01

ಸಾಕ್ಷಿದಾರರ ಹೆಸರು : ಪರಸಪ್ಪ ಮೂರಮಟ್ಟಿ

ತಂದೆಯ ಹೆಸರು : ಬಸಪ್ಪ

ವಯಸ್ಸು : 50 ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಚಿಮ್ಮಲಗಿ, ಬ.ಬಾಗೇವಾಡಿ ತಾಲೂಕ

- - - - -

ನೋಟ್: 3 ನೇ ಆರೋಪಿ ನ್ಯಾಯಾಲಯದ ಮುಂದೆ ಗೈರುಹಾಜರಾಗಿದ್ದು, ಆರೋಪಿ ಪರ ವಕೀಲರು 3 ನೇ ಆರೋಪಿಯ ಗುರುತಿನ ಬಗ್ಗೆ ತಕರಾರು ಮಾಡುವುದಿಲ್ಲ ಎಂದು ಹೇಳಿ ವಿನಾಯಿತಿ ಅರ್ಜಿಯನ್ನು ಸಲ್ಲಿಸಿದ್ದರಿಂದ ಸಾಕ್ಷಿಯ ಹೇಳಿಕೆ ಪಡೆದುಕೊಳ್ಳಲಾಯಿತು.

**ಇಂದು ದಿನಾಂಕ 24.06.2019 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**
**ಮುಖ್ಯವಿಚಾರಣೆ: ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನಾನು ಹಿಂದೂ ವಾಲ್ಮೀಕಿ ಜನಾಂಗಕ್ಕೆ ಸಂಬಂಧಪಟ್ಟವನು, ಅದು ಪರಿಶಿಷ್ಟ ಪಂಗಡಕ್ಕೆ ಸೇರಿರುತ್ತದೆ. ಚಾ.ಸಾ.4 ನನ್ನ ತಮ್ಮ, ಚಾ.ಸಾ.5 ನನ್ನ ತಮ್ಮನ ಹೆಂಡತಿ, ಚಾ.ಸಾ,6 ನನ್ನ ತಮ್ಮನ ಮಗಳು, ಚಾ.ಸಾ.7 ನನ್ನ ತಾಯಿ, ಚಾ.ಸಾ.8 ನನ್ನ ಹೆಂಡತಿ, ಚಾ.ಸಾ.9 ನನ್ನ ತಮ್ಮನ ಮಗ, ನಾವೆಲ್ಲರೂ ಒಂದೇ ಜನಾಂಗದವರು. ಆರೋಪಿತರು ಅಂಬಿಗೇರ ಜನಾಂಗದವರು, ಅವರು ಪ್ರವರ್ಗ-1. ನಮ್ಮ ಗ್ರಾಮ ಮುಳುಗಡೆ ಆಗಿ ಎಲ್ಲ ಜನರೂ ಚಿಮ್ಮಲಗಿಗೆ ವಲಸೆ ಬಂದಿದ್ದಾರೆ. ನಮಗೆ 209 ಮತ್ತು 210 ಪ್ಲಾಟ್ ಸಂಬಂಧಪಟ್ಟಿದ್ದವು ಆಗಿರುತ್ತವೆ, ಸದರಿ ಪ್ಲಾಟಗಳನ್ನು ಸರ್ಕಾರದವರು ನಮ್ಮ ಗ್ರಾಮ ಮುಳುಗಡೆ ಆಗಿದ್ದರಿಂದ ಮಂಜೂರು ಮಾಡಿದ್ದಾರೆ. ಪ್ಲಾಟುಗಳ ಸಂಬಂಧ ಬಾಗೇವಾಡಿ ನ್ಯಾಯಾಲಯದಲ್ಲಿ ಸಿವಿಲ್ ದಾವೆ ಇತ್ತು, ಅದು ನನ್ನ ಪರವಾಗಿ ಆಗಿದೆ. ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ಇದೆ.

2. ದಿನಾಂಕ 10.08.2016 ರಂದು ಬೆಳಿಗ್ಗೆ 7 ಗಂಟೆಗೆ ನಾನು ಸಂಡಾಸಿಗೆ ಹೊರಟಾಗ, 1 ನೇ ಆರೋಪಿ ಶೇಖಪ್ಪ ಬಸಪ್ಪ ಸಂಗಣ್ಣವರ ಬಂದು ನನಗೆ ನಿಲ್ಲು ಮಗನೇ ಎಂದು ಹೇಳಿದ, ಶೇಖಪ್ಪ ಬಸಪ್ಪ ಸಂಗಣ್ಣವರ ಜೊತೆ ಉಳಿದ 20 ಜನರೂ ಸಹಿತ ಬಂದರು. ಶೇಖಪ್ಪ ಬಸಪ್ಪ ಸಂಗಣ್ಣವರ ಕಬ್ಬಿಣದ ರಾಡಿನಿಂದ ನನ್ನ ಎಡಗೈ ಮೊಣಕೈಗೆ ಹೊಡೆದ, ಶೇಖಪ್ಪ ನನ್ನ ಕಾಲಿಗೆ ಸಹಿತ ಹೊಡೆದ, 2 ನೇ ಆರೋಪಿ ನನಗೆ ಕಟ್ಟಿಗೆಯಿಂದ ನನ್ನ ತಲೆಯ ಹಿಂಭಾಗಕ್ಕೆ ಹೊಡೆದ. ನಾನು ಚೀರಾಟ ಮಾಡಿದಾಗ, ನನ್ನ ತಮ್ಮ ಹಣಮಂತ ಮೂರಬಟ್ಟಿ ಓಡಿ ಬಂದು, ನನ್ನನ್ನು ಬಿಡಿಸಲು ಬಂದಾಗ, 3 ನೇ ಆರೋಪಿ ನನ್ನ ತಮ್ಮನಿಗೆ ಬಡಿಗೆಯಿಂದ ಹೊಡೆದ. ನನ್ನ ತಮ್ಮನ ಹೆಂಡತಿ ಮಹಾದೇವಿ ಬಂದಾಗ, ಆಕೆಗೆ 4 ನೇ ಆರೋಪಿ ಬಡಿಗೆಯಿಂದ ಹೊಡೆದ, ಆಕೆಯನ್ನು ಎಳೆದಾಡಿದ. ನನ್ನ ತಮ್ಮನ ಮಗಳು ಚಂದ್ರಕಲಾ ಬಂದಾಗ, ವಿಠಲ ಸೂರಪ್ಪ ಸಂಗಣ್ಣವರ ಕಟ್ಟಿಗೆಯಿಂದ ಆಕೆಯ ಕಾಲಿಗೆ ಹೊಡೆದು ಎಳೆದುಹಾಕಿದ, ಆಗ ನನ್ನ ತಾಯಿ ಬಿಡಿಸಲು ಬಂದಾಗ, ನನ್ನ ತಾಯಿಗೆ ಬಸವರಾಜ ಸೂರಪ್ಪ ಸಂಗಣ್ಣವರ ಕಬ್ಬಿಣದ ರಾಡ್‌ದಿಂದ ಎರಡೂ ಕೈಗಳಿಗೆ ಹೊಡೆದ, ಆಗ ನನ್ನ ಹೆಂಡತಿ ನೀಲಮ್ಮ ಬಂದಾಗ ಆಕೆಗೆ 7 ನೇ ಆರೋಪಿ ಸಂಜೀವಪ್ಪ ಆಕೆಯನ್ನು ಎಳೆದಾಡಿ ಅವಮಾನ ಮಾಡಿದನು. ಆತನ ಜೊತೆ ಸಂಗವ್ವ ಇದ್ದಳು ಆಕೆ ನನ್ನ ಹೆಂಡತಿಗೆ ಕಲ್ಲು ಒಗೆದಳು. ಸಂಗಪ್ಪ ಸೋಮಪ್ಪ ಬಾಗಿ ಇವನು ಸಹಿತ ಜಗ್ಗಾಡಿ ಅವಮಾನ ಮಾಡಿದ, ಬಿಡಿಸಲು ನನ್ನ ತಮ್ಮನ ಮಗ ಭೀಮರಾಯ ಬಂದಾಗ, 9 ನೇ ಆರೋಪಿ ಹಾಗೂ ಯಲ್ಲಪ್ಪ ದುಂಡಪ್ಪ ಸಂಗಣ್ಣವರ ಭೀಮರಾಯನಿಗೆ ಕಲ್ಲಿನಿಂದ ಹೊಡೆದರು. ಆರೋಪಿಗಳು ನಮಗೆ ಜಾತಿಯೆತ್ತಿ ಬೈಯ್ದರು. ನಾನು ಮೇಲೆ ಹೇಳಿದ ಕೆಲವೊಬ್ಬರು ಈ ದಿನ ನ್ಯಾಯಾಲಯದ ಮುಂದೆ ಇಲ್ಲ. ನಮಗೆ ಬೈಯ್ದವರು ಅಂದರೆ, 3 ನೇ ಆರೋಪಿ ರೇಣುಕಾ, ನಂತರ ಶೋಭಾ, ಗೌರವ್ವ, ಮಹಾದೇವಿ, ಸಂಗವ್ವ ಮಾಗಿ, ಕಲ್ಲವ್ವ ಸಂಗಣ್ಣವರ, ಯಮನವ್ವ ಸಂಗಣ್ಣವರ ರವರುಗಳು ಅವಾಚ್ಯ ಶಬ್ದಗಳಿಂದ ಬೈಯ್ದು, ಕೈಯಿಂದ ಹೊಡಿ-ಬಡಿ ಮಾಡಿದ್ದಾರೆ. ಶಿವಪ್ಪ ಶಿವಣಗೌಡ, ಶಂಕರಗೌಡ ಪಾಟೀಲ, ಗುಂಡಪ್ಪ ಬಿಡಿಸಲು ಬಂದರು.

3. ನಂತರ ಗಾಯಾಳುಗಳನ್ನು ನಿಡಗುಂದಿಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಅವರು ಹಿಡಿಯಲಿಲ್ಲ, ಕಾರಣ ಬಾಗಲಕೋಟೆಗೆ ಕರೆದುಕೊಂಡು ಹೋಗಲಾಯಿತು, ಅಲ್ಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲಾಯಿತು. ಆಗ ನಾನು ಬಾಗಲಕೋಟೆಯ ಸರ್ಕಾರಿ ಆಸ್ಪತ್ರೆಗೆ

ಪಿ.ಡಬ್ಲ್ಯೂ.**03**
ಸಿ.ಡಬ್ಲ್ಯೂ.**01**

ಪೋಲಿಸರು ಬಂದಿದ್ದು , ಅವರಿಗೆ ಫಿರ್ಯಾದಿಯನ್ನು ಕೊಟ್ಟಿರುತ್ತೇನೆ. ಸಾಕ್ಷಿ ಫಿರ್ಯಾದಿಯಲ್ಲಿ ತಮ್ಮ ಹೆಬ್ಬೆಟ್ಟಿನ ಗುರುತು ಗುರ್ತಿಸಿದ್ದರಿಂದ, **ಸದರಿ ಫಿರ್ಯಾದಿಯನ್ನು ನಿ.ಪಿ.4 ಅಂತಾ ಗುರ್ತಿಸಲಾಯಿತು.**

4. ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ಸಾಕ್ಷಿ ಗುರ್ತಿಸಿದ್ದಾರೆ. ಈ ಪ್ರಕರಣದಲ್ಲಿ ಸಾಕ್ಷಿ ಇಲ್ಲ ಎಂದು ಬಿಟ್ಟ ಆರೋಪಿಗಳನ್ನು ನೋಡಿದರೂ ಸಹಿತ ನಾನು ಗುರ್ತಿಸುತ್ತೇನೆ. ಇಲ್ಲಿ ಬರದೇ ಇರುವವರು ಅಂದರೆ ಶೇಖಪ್ಪ, ವಿಠಲ, ಬಸವರಾಜ, ಯಲ್ಲಪ್ಪ, ಲಕ್ಷ್ಮಣ, ಗೌರವ್ವ, ಯಮನವ್ವ, ರೇಣುಕಾ, ಕಲ್ಲವ್ವ, ಸಂಗವ್ವ, ಮಹಾದೇವಿ ಮತ್ತು ಶೋಭಾ. ಫಿರ್ಯಾದಿ ಕೊಟ್ಟ ನಂತರ ಪೋಲಿಸರು ನನ್ನ ಹೇಳಿಕೆ ಪಡೆದಿಲ್ಲ. 2 ರಿಂದ 4, 7, 9, 11 ರಿಂದ 13 ನೇ ಆರೋಪಿತರು ಮಾತ್ರ ನನಗೆ ಹೊಡೆದಾಗ ಇದ್ದರು, ಉಳಿದವರು ಇದ್ದಿರಲಿಲ್ಲ ಎಂದು ನಾನು ಪುರವಣಿ ಹೇಳಿಕೆ ಕೊಟ್ಟಿಲ್ಲ. ಬಾಗಲಕೋಟೆ ಸರ್ಕಾರಿ ಆಸ್ಪತ್ರೆಯಲ್ಲಿ ಉಪಚಾರ ಪಡೆಯಲಾಗಿದೆ.

ಪಾಟೀ ಸವಾಲುಃ ಶ್ರೀ ಎಸ್ ಆರ್ ಕೆ ವಕೀಲರಿಂದ ಆರೋಪಿತರ ಪರವಾಗಿ

ಆರೋಪಿತರ ಪರ ವಕೀಲರು ಸಮಯ ಕೇಳಿದ್ದರಿಂದ ಸಮಯ ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪೂರ.